**ಪಾಠ-11** **ಮಾರ್ಚ್ 6-12**

# ಹೋರಾಡುವ ಪ್ರೀತಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 55:1–7, ಯೆಶಾಯ 55:6–13, ಯೆಶಾಯ 58:1–12, ಯೆಶಾಯ 58:13,14.

**ಸ್ಮರಣವಾಕ್ಯ : "ನಿಮಗೆ ಪ್ರಿಯವಾದದ್ದನ್ನು ಹಸಿದವರಿಗೆ ಒದಗಿಸಿ ಕುಗ್ಗಿದವರ ಆಸೆಯನ್ನು ನೆರವೇರಿಸಿದರೆ ಆಗ ನಿಮಗೆ ಕತ್ತಲಲ್ಲಿ ಬೆಳಕು ಉದಯಿಸುವುದು. ನಿಮ್ಮ ಅಂಧಕಾರವು ಪರಿಹಾರವಾಗಿ ಮಧ್ಯಾಹ್ನವಾಗುವುದು"** (ಯೆಶಾಯ 58:10).

ಯಹೂದಿ ಧಾರ್ಮಿಕ ನಾಯಕನೊಬ್ಬನು ತನ್ನ ಹೆಂಡತಿಯೊಡನೆ ಲಿಂಕೋನಿನಲ್ಲಿ ಅಮೇರಿಕ ದೇಶದ ನೆಬ್ರಾಸ್ಕರಾಜ್ಯದ ಲಿಂಕೋನೆಂಬ ಊರಿನಲ್ಲಿ ವಾಸಿಸುವಾಗ ಆತನಿಗೆ ಅನಾಮಿಕನೊಬ್ಬನು ದೂರವಾಣಿಯ ಅಶ್ಲೀಲ ಮತ್ತು ಬೆದರಿಕೆಯ ಕರೆಗಳನ್ನು ಮಾಡುತ್ತಿದ್ದನು. ಆ ಕರೆಗಳನ್ನು ಮಾಡುತ್ತಿದ್ದವನು ಒಂದು ಜನಾಂಗದ್ವೇಷಿಯ ಗುಂಪಿನ ನಾಯಕನೆಂಬುದಾಗಿ ಗೊತ್ತಾದ ಮೇಲೆ ಅವನನ್ನು ಆ ಯೆಹೂದಿಯು ಪೊಲೀಸರಿಗೆ ಹಿಡಿದುಕೊಡಬಹುದಿತ್ತು. ಆದರೆ ಅವರು ಹಾಗೆ ಮಾಡದೆ ಬಹಳ ಭಿನ್ನವಾದ ವಿಧಾನವನ್ನು ಅನುಸರಿಸಿದನು. ಆ ಅನಾಮಿಕನು ಅಂಗವಿಕಲನೆಂದು ತಿಳಿದಾಗ ಗಂಡ-ಹೆಂಡತಿಯರು ಅವನ ಮನೆಗೆ ಹೋಗಿ ಭೋಜನ ಕೊಟ್ಟು ಸತ್ಕರಿಸಿದರು. ಇದರಿಂದ ಅವನು ಬೆಕ್ಕಸ

---

* **ಈ ವಾರದ ಪಾಠವನ್ನು ಮಾರ್ಚ್ 13ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಬೆರಗಾದನು, ಆತನಲ್ಲಿದ್ದ ದ್ವೇಷವು ಅವರು ತೋರಿದ ಪ್ರೀತಿಗೆ ಕರಗಿಹೋಯ್ತು. ಆ ದಂಪತಿಗಳು ಅವನನ್ನು ಆಗಾಗ ಭೇಟಿ ಮಾಡಹತ್ತಿದರು, ಅವರ ಮಧ್ಯೆ ಸ್ನೇಹ ಬೆಳೆಯಿತು. ಆತನು ಯೆಹೂದಿಯಾಗಿ ಮತಾಂತರ ಹೊಂದುವ ಯೋಚನೆಯನ್ನು ಸಹಾ ಮಾಡಿದನು! ಕೇಡಿನ ಬಂಧಗಳನ್ನು ಬಿಚ್ಚುವುದು, ನೊಗದ ಕಣ್ಣಿಗಳನ್ನು ಕಳಚುವುದು, ಜಜ್ಜಿ ಹೋದವರನ್ನು ಬಿಡುಗಡೆ ಮಾಡುವುದು, ನೊಗಗಳನ್ನೆಲ್ಲಾ ಮುರಿಯುವುದು, ಹಸಿದವರಿಗೆ ಅನ್ನವನ್ನು ಹಂಚುವುದರ ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವುದು, ಬೆತ್ತಲೆಯವರನ್ನು ಕಂಡಾಗಲೆಲ್ಲಾ ಅವರಿಗೆ ಹೊದಿಸುವುದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಪ್ಪಿಸಿಕೊಳ್ಳದಿರುವುದು ಇವುಗಳೇ ನನಗೆ ಇಷ್ಟವಾದ ಉಪವಾಸ ವ್ರತವಲ್ಲವೇ (ಯೆಶಾಯ 58:6,7). ವಿಪರ್ಯಾಸವೇನೆಂದರೆ ಲಿಂಕೋನಿನಲ್ಲಿ ವಾಸವಾಗಿದ್ದ ಆ ಯಹೂದಿ ದಂಪತಿಗಳು ಅಂತಹ ಉಪವಾಸವನ್ನು ಅವನಿಗೆ ಭೋಜನ ಕೊಡುವುದರಲ್ಲಿ ಆಚರಿಸಿದರು. ಅದರಿಂದ ಪೂರ್ವಾಗ್ರಹದಿಂದ ಜನಾಂಗದ್ವೇಷದ ಬಂಧನದಲ್ಲಿದ್ದ ಅವನನ್ನು ಬಿಡಿಸಿದರು.

ಪ್ರವಾದಿಯಾದ ಯೆಶಾಯನ ಮೂಲಕ ದೇವರು ನಿರೂಪಿಸಿರುವ ಈ ಮುಖ್ಯವಾದ ಆಧ್ಯಾತ್ಮಿಕ ತತ್ವದ ಬಗ್ಗೆ ಹೆಚ್ಚಾಗಿ ಕಲಿಯೋಣ.

**ಭಾನುವಾರ** **ಮಾರ್ಚ್ 7**

## ಕ್ರಯವಿಲ್ಲದೆ ಕೊಂಡುಕೊಳ್ಳಿರಿ! (ಯೆಶಾಯ 55:1–7)

ಈ ವಚನಗಳನ್ನು ಓದಿರಿ: ಎಲೈ, ಬಾಯಾರಿದ ಸಕಲ ಜನರೇ, ನೀರಿನ ಬಳಿಗೆ ಬನ್ನಿರಿ, ಹಣವಿಲ್ಲದವನು ಸಹ ಬರಲಿ! ಬನ್ನಿರಿ, ಕೊಂಡುಕೊಳ್ಳಿರಿ, ಒಂದು ದ್ರಾಕ್ಷಾರಸವನ್ನೂ ಹಾಲನ್ನೂ ಹಣಕೊಡದೆ ಕ್ರಯವಿಲ್ಲದೆ ತೆಗೆದುಕೊಳ್ಳಿರಿ (ಯೆಶಾಯ 55:1). ಇಲ್ಲಿ ಯಾವ ವೈರುಧ್ಯವನ್ನು ಕಾಣುವಿರಿ?

ನೀವು ಆಹಾರವನ್ನು ತೆಗೆದುಕೊಂಡು ದೊಡ್ಡಪಟ್ಟಣದ, ರಸ್ತೆಯೊಂದರ ಮೇಲೆ ನಿಂತು ಹಸಿದವರಿಗೆ ನಿರ್ಗತಿಕರಿಗೆ ಬನ್ನಿರಿ ಹಣವಿಲ್ಲದವನು ಸಹ ಬರಲಿ! ಬನ್ನಿರಿ ಕೊಂಡುಕೊಳ್ಳಿರಿ ಎಂದು ಸಾರಿ ಹೇಳುತ್ತೀರಿ ಎಂದುಕೊಳ್ಳಿರಿ. ಆದರೆ ಹಣವಿಲ್ಲದೆ ಕೊಂಡುಕೊಳ್ಳುವುದು ಹೇಗೆ ಸಾಧ್ಯ?

ಆದರೂ ನೀವು ಯೆಶಾಯನು ಹೇಳಿದ ಹಾಗೆ ಹಣಕೊಡದೆ ಕ್ರಯವಿಲ್ಲದೆ ತೆಗೆದುಕೊಳ್ಳಿರಿ ಎಂಬ ಪದಗಳನ್ನು ಸೇರಿಸಿ ಹೇಳಿದರೆ ವಿಷಯವು ಸ್ಪಷ್ಟವಾಗುತ್ತದೆ (ಯೆಶಾಯ 55:1). ಯೆಶಾಯನು ಜನರಿಗೆ ಕ್ಷಮಾಪಣೆಯನ್ನು ಉಚಿತವಾಗಿ ಹೊಂದಿಕೊಳ್ಳಿರಿ ಎಂದು ಮನವಿ ಮಾಡುತ್ತಾನೆ (ಯೆಶಾಯ 55:7). ಆದಾಗ್ಯೂ 'ಕೊಂಡುಕೊಳ್ಳಿರಿ' ಎಂಬುದು ಜನರ ಅಗತ್ಯತೆಗಳನ್ನು ಮತ್ತು ಬಯಕೆಗಳನ್ನು ಪೂರೈಸುವುದು ಒಂದು ಮೌಲ್ಯವುಳ್ಳದ್ದೆಂದು ಅದನ್ನು ದೇವರೆ ಕೊಡುತ್ತಾನೆಂದು ಒತ್ತಿ ಹೇಳುತ್ತದೆ. ಆದುದರಿಂದ ಇಲ್ಲಿ ಪಡೆದುಕೊಳ್ಳುವುದು ಎಂದರೆ ವ್ಯಾಪಾರದಲ್ಲಿ ಭಾಗಿಯಾಗುವುದರ (ಬೆಲೆಯನ್ನು ಕೊಟ್ಟು ವಿನಿಮಯ ನಡೆಸುವುದು) ಅವಶ್ಯಕತೆಯನ್ನು ಹೇಳುತ್ತದೆ. ದೇವರು ತನ್ನ ಜನರೊಂದಿಗೆ ಸಂಬಂಧವನ್ನು ಮರುಸ್ಥಾಪಿಸಿದ ಒಡಂಬಡಿಕೆಯ ಅನುಸಾರವಾಗಿ ಕ್ಷಮಾಪಣೆಯನ್ನು ಉಚಿತವಾಗಿ ಕೊಡುತ್ತಾನೆಯೆ ಹೊರತು ಅದು ಅವನಿಗೆ ಉಚಿತವಾಗಿ ದೊರಕುವ ಕಾರಣದಿಂದಲ್ಲ. ಆತನು ಅದನ್ನು ತನ್ನ ಅಭಿಷಿಕ್ತನಿಂದ ರಕ್ತಸಿಕ್ತವಾದ ಬೆಲೆಯನ್ನು ತೆತ್ತು ಸಂಪಾದಿಸಿಕೊಂಡಿದ್ದಾನೆ ಉಚಿತವಾಗಿ ದಯಪಾಲಿಸಿದಾಗ್ಯೂ, ಅದು ದೊಡ್ಡಬೆಲೆ ಕೊಟ್ಟದ್ದರಿಂದ ಆತನಿಗೆ ಬಂದಿದೆ.

ನಮ್ಮ ರಕ್ಷಣೆಯ ಬೆಲೆ ಏನು? (1 ಪೇತ್ರ 1:18,19).

ಯೆಶಾಯನ ರಕ್ಷಣೆಯ ವಿಧಾನವನ್ನು ಹೊಸ ಒಡಂಬಡಿಕೆಯು ನೀಡಿರುವ ವಿಧಾನದೊಂದಿಗೆ ಹೇಗೆ ಹೋಲಿಸಬಹುದು? (ಎಫೆಸ 2:8,9).

ಹಳೆಯ ಒಡಂಬಡಿಕೆಯಲ್ಲಿ ಯೆಶಾಯನು ರಕ್ಷಣೆಯನ್ನು ಸಣ್ಣಕೋಶದಲ್ಲಿರುವ ಔಷಧದಂತೆ ಕೂಲಂಕಷವಾಗಿ ಇಟ್ಟಿದ್ದಾನೆ, ಇದು ಮತ್ತು ಹೊಸಒಡಂಬಡಿಕೆಯ ಸುವಾರ್ತೆಯು ಒಂದೇ ಆಗಿದೆ.

ಕ್ರಿಯೆಗಳಿಂದ ರಕ್ಷಣೆ ಎಂಬುದಾಗಿ ಹಳೆಯ ಒಡಂಬಡಿಕೆಯು ಹೇಳುವುದಿಲ್ಲ ಅದನ್ನು ಕೃಪೆಯಿಂದಲೇ ರಕ್ಷಣೆ ಎಂಬ ಹೊಸ ಒಡಂಬಡಿಕೆಯ ತತ್ವವೂ ಸಹ ರದ್ದುಮಾಡಿಲ್ಲ. ದೇವರು ಆದಾಮ ಮತ್ತು ಹವ್ವಳಿಗೆ ವಿಮೋಚಕನ ಮೆಸ್ಸೀಯನ ವಾಗ್ದಾನ ಮಾಡಿದಂದಿನಿಂದ ರಕ್ಷಣೆಗೆ ಇರುವ ಮಾರ್ಗವು ಒಂದೇ ಆಗಿದೆ (ಆ.ಕಾಂಡ 3:15). ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಯಾಗುತ್ತದೆ

(ಎಫೆಸ 2:8). ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ (ರೋಮ 6:23). ಪುರಾತನ ಕಾಲದಲ್ಲಿ ನಿತ್ಯಜೀವಕ್ಕಾಗಿ ವ್ಯರ್ಥ ಅನ್ವೇಷಣೆಗಳನ್ನು ಮಾಡಿದ ಗಿಲ್ಲಮೇಶನಿಂದ ಹಿಡಿದು ಪುನರ್ಜನ್ಮದಲ್ಲಿ ನಂಬಿಕೆಯಿಟ್ಟು ರಕ್ಷಣೆಯ ವಿವಿಧ ಮಾರ್ಗಗಳನ್ನು ಪ್ರಯತ್ನಿಸಿದ ಆಧುನಿಕ ನಟರವರೆಗಿನವು ವ್ಯರ್ಥಪ್ರಯತ್ನಗಳಾಗಿವೆ. ಆದುದರಿಂದ ಅವರೆಲ್ಲರಿಗೂ ತಮ್ಮ ಸಲುವಾಗಿ ಶಿಲುಬೆಯಲ್ಲಿ ಯೇಸುಕ್ರಿಸ್ತನು ಸಾಧಿಸಿರುವುದನ್ನು ತಿಳಿದುಕೊಳ್ಳುವ ಅಗತ್ಯವಿರುತ್ತದೆ.

ರಕ್ಷಣೆಯು ಉಚಿತವೆಂದ ಮೇಲೆ ಅದನ್ನು ಹೊಂದಿಕೊಳ್ಳಲು ನಾವು ಏನನ್ನೂ ಮಾಡುವ ಅಗತ್ಯವಿಲ್ಲ. ನಮ್ಮ ಕ್ರಿಯೆಗಳು ನಮ್ಮನ್ನು ರಕ್ಷಿಸುವಷ್ಟು ಒಳ್ಳೆಯವುಗಳಾಗಿರುವುದಿಲ್ಲ. ಆದರೂ, ಅದೇ ಸಮಯದಲ್ಲಿ ನಮಗಿರುವುದೆಲ್ಲವನ್ನೂ ಅದಕ್ಕೆ ಬೆಲೆಯಾಗಿ ತೆರಬೇಕು ಎಂದರೆ ಏನು ಅರ್ಥ? (ಉದಾಹರಣೆಗೆ ಮತ್ತಾಯ 10:39; ಲೂಕ 9:23, ಲೂಕ 14:26, ಫಿಲಿಪ್ಪಿ 3:8ನ್ನು ನೋಡಿರಿ).

**ಸೋಮವಾರ** **ಮಾರ್ಚ್ 8**

## ಉನ್ನತ ಆಲೋಚನೆಗಳು ಮತ್ತು ಮಾರ್ಗಗಳು (ಯೆಶಾಯ 55:6–13)

ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಹಾಗೆಯೆ ದೇವರು ತನ್ನ ಆಲೋಚನೆಗಳು ಮತ್ತು ಮಾರ್ಗಗಳು ನಮ್ಮ ಆಲೋಚನೆ ಮತ್ತು ಮಾರ್ಗಗಳಿಗಿಂತ ಉನ್ನತವಾದವುಗಳು ಎಂದು ಯಾಕೆ ಹೇಳುತ್ತಾನೆ? (ಯೆಶಾಯ 55:8,9). ಇದರ ಅರ್ಥವು ಏನೆಂಬುದಾಗಿ ಆಲೋಚಿಸುವಿರಿ?

ದೇವರು ಸೃಷ್ಟಿ ಮಾಡಿರುವ ಈ ವಿಶ್ವದಲ್ಲಿ ಬಹಳ ಸರಳವಾಗಿ ತೋರುವ ವಿಷಯಗಳು ನಮ್ಮ ಮನಸ್ಸು ಅರಿತುಕೊಳ್ಳಲಾರದಷ್ಟು ರಹಸ್ಯಗಳಿಂದ ಕೂಡಿವೆ ಮತ್ತು ದೇವರ ಮಾರ್ಗಗಳು ಮನುಷ್ಯನ ಗ್ರಹಿಕೆಯನ್ನು ಮೀರಿದವುಗಳಾಗಿವೆ ಎಂಬುದಕ್ಕೆ ಪ್ರಶ್ನೆಯೇ ಇಲ್ಲ. ಅನಂತವಾದ ಉತ್ಕೃಷ್ಟವಾದ ಆತನ ಜ್ಞಾನವು ನಾವು ದೀನರಾಗಿ ಸಹಾಯ ಪಡೆದುಕೊಳ್ಳುವಂತೆ ಸರಳಗೊಳಿಸಿ ಕೊಡಬೇಕು (ಯೆಶಾಯ 57:15ನ್ನು ನೋಡಿರಿ).

ಯೆಶಾಯ 55:6-9 ವಚನಗಳನ್ನು ಓದಿರಿ. ನಾವು ಕಲ್ಪನೆ ಮಾಡಿಕೊಳ್ಳುವುದಕ್ಕಿಂತ ಆತನ ಆಲೋಚನೆಗಳು ಮತ್ತು ಮಾರ್ಗಗಳು ನಮ್ಮ ಆಲೋಚನೆ ಮತ್ತು ಮಾರ್ಗಗಳಿಗಿಂತ ಉನ್ನತವಾಗಿವೆ ಎಂದು ದೇವರು ಯಾವ ಅರ್ಥದಲ್ಲಿ (ಸಾಂದರ್ಭಿಕತೆ) ಹೇಳುತ್ತಾನೆ?

ವಿಶ್ವದ ಎಲ್ಲಾ ದೊಡ್ಡ ರಹಸ್ಯಗಳಿಗಿಂತ ನಿಸ್ಸಂದೇಹವಾಗಿ ದೊಡ್ಡದಾಗಿರುವ ರಹಸ್ಯವು ದೇವರು ಕಲ್ಪಿಸಿದ "ರಕ್ಷಣೆಯ ಯೋಜನೆ"ಯಾಗಿದೆ ಇದನ್ನು ನಾವು ಅರ್ಥಮಾಡಿಕೊಳ್ಳುವುದಕ್ಕೆ ಕೇವಲ ಪ್ರಾರಂಭಿಸಬಹುದಷ್ಟೆ (ಎಫೆಸ 6:19). ಅದೇನೆಂದರೆ ಈ ವಿಶ್ವವನ್ನು ಸೃಷ್ಟಿಸಿದ ಸೃಷ್ಟಿಕರ್ತನು ಮಾನವನ ರೂಪ ಧರಿಸಿಕೊಳ್ಳುವಷ್ಟು ತನ್ನನ್ನು ಕೆಳಮಟ್ಟಕ್ಕೆ ತಗ್ಗಿಸಿಕೊಂಡು, ಶ್ರಮೆ ಮತ್ತು ಬಾಧೆಗಳ ಜೀವನವನ್ನು ನಡೆಸಿ, ದೇವರು ನಮ್ಮನ್ನು ಕರುಣೆಯಿಂದ ಕ್ಷಮಿಸಲು ಸಾಧ್ಯವಾಗುವಂತೆ ನಮ್ಮ ಪಾಪಗಳನ್ನು ಹೊತ್ತುಕೊಂಡು ತನ್ನನ್ನೇ ಯಜ್ಞವನ್ನಾಗಿ ಸಮರ್ಪಿಸಿಕೊಂಡದ್ದು ಯುಗಯುಗಗಳವರೆಗೆ ನಿತ್ಯಕ್ಕೂ ಸೃಷ್ಟಿಗೊಂಡ ಜೀವಿಗಳ ಹೃದಯಗಳನ್ನು ಪುಳಕಗೊಳಿಸುವ ಸತ್ಯವಾಗಿದೆ.

"ವಿಮೋಚನೆಯ ವಿಷಯವನ್ನು ದೇವದೂತರು ಸಹಾ ಆಸಕ್ತಿಯಿಂದ ನೋಡಬಯಸುತ್ತಾರೆ; ಇದು ವಿಮೋಚಿತರಾದವರಿಗೆ ಎಂದೆಂದಿಗೂ ಅಂತ್ಯವಾಗದ ಯುಗಯುಗಗಳುದ್ದಕ್ಕೂ ಕಲಿಯುವ ಜ್ಞಾನವೂ ಗೀತೆಯೂ ಆಗಿದೆ. ಹೀಗಿರುವಾಗ ಈಗಲೂ ಸಹ ಇದನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುವುದಕ್ಕೆ ಯೋಗ್ಯವಾದುದಲ್ಲವೆ?

ರಕ್ಷಣೆಯ ವಿಷಯವು ಅಕ್ಷಯವಾದುದು (ಎಂದೆಂದಿಗೂ ಮುಗಿದುಹೋಗದ ವಿಷಯ). ಯೇಸುಕ್ರಿಸ್ತನ ನರಾವತಾರ, ಆತನ ದೋಷಪರಿಹಾರಕ ಯಜ್ಞ, ಮತ್ತು ನಮಗೂ ದೇವರಿಗೂ ಮಧ್ಯಸ್ಥನಾಗಿ ಮಾಡುವ ಕೆಲಸ ಇವೆಲ್ಲವುಗಳ ಅಧ್ಯಯನವು ಅಧ್ಯಯನಶೀಲನಾದ ವಿದ್ಯಾರ್ಥಿಯ ಮನಸ್ಸನ್ನು ಕಾಲವಿರುವವರೆಗೂ ತೊಡಗಿಸಿಕೊಳ್ಳುತ್ತದೆ; ಆವಾಗ ಅಸಂಖ್ಯಾತ ವರ್ಷಗಳ (ಲೆಕ್ಕವಿಲ್ಲದಷ್ಟು) ಕಾಲವನ್ನು ಹೊಂದಿರುವ ಪರಲೋಕದ ಕಡೆಗೆ ನೋಡುತ್ತಾ "ದೈವತ್ವದ ರಹಸ್ಯವು ಮಹತ್ವಪೂರ್ಣವಾದದು" ಎಂದು ಆಶ್ಚರ್ಯದಿಂದ ಉದ್ಗರಿಸುತ್ತಾನೆ- ಎಲೆನ್

ಜಿ ವೈಟಮ್ಮನವರ ಮೈ ಲೈಫ್ ಟುಡೇಯ 360ನೇ ಪುಟ.

ಕೆಟ್ಟ ಕೆಲಸಗಳನ್ನು ನೆನಪು ಮಾಡಿಕೊಳ್ಳಿರಿ: ನೀವು ಮನಸ್ಸು ನೋಯಿಸಿದ ಜನರು, ನೀವು ಆಡಿದ ಕ್ರೂರ ಮಾತುಗಳು ಇತರರನ್ನು ನಿರಾಶೆಪಡಿಸಿದ ನಿಮ್ಮ ರೀತಿಗಳು.

ಆದಾಗ್ಯೂ ಯೇಸುಕ್ರಿಸ್ತನ ಮೂಲಕ ನೀವು ಇವೆಲ್ಲವುಗಳಿಗೆ ಕ್ಷಮಾಪಣೆ ಹೊಂದಿಕೊಂಡು ದೇವರ ದೃಷ್ಟಿಯಲ್ಲಿ ಪರಿಪೂರ್ಣನಾಗಿ ಮತ್ತು ನೀತಿವಂತನಾಗಿ ಈಗಲೇ ನಿಂತುಕೊಳ್ಳಬಹುದು. ಇದು ಒಂದು ರಹಸ್ಯವಲ್ಲದಿದ್ದರೆ ರಹಸ್ಯವೆಂಬುದು ಇನ್ನೇನು?

**ಮಂಗಳವಾರ** **ಮಾರ್ಚ್ 9**

## ಗಾಢ ಸ್ನೇಹಿತರು (ಯೆಶಾಯ 58:1–8)

ಯೆಶಾಯ 58:3ರಲ್ಲಿ ಉಪವಾಸವೆಂದರೆ ಏನನ್ನು ಸೂಚಿಸುತ್ತದೆ?

ಇದು ದೋಷ ಪರಿಹಾರಕ ದಿನದಲ್ಲಿ ಮಾಡುವ ಉಪವಾಸವಿರಬೇಕು. ದೇವರಿಂದ ವಿಧಿಸಲ್ಪಟ್ಟ ಉಪವಾಸ ಇದು ಮಾತ್ರ (ಯಾ.ಕಾಂಡ 16:29, 31, ಯಾ.ಕಾಂಡ 23:27–32). ಯೆಶಾಯ 58:3ರಲ್ಲಿ 'ನಮ್ಮನ್ನು ಕುಂದಿಸಿಕೊಂಡಿದ್ದೇವೆ' ಎಂಬ ಪದವು ಯಾಜಕಕಾಂಡದ ಉಪವಾಸವನ್ನು ದೃಢಪಡಿಸುತ್ತದೆ. ತನ್ನನ್ನು ತಾನು ಕುಂದಿಸಿಕೊಳ್ಳುವುದು ಅಥವಾ ದಂಡಿಸಿಕೊಳ್ಳುವುದು ನಾನಾ ವಿಧವಾದ ನಿರಾಕರಣೆಯ ರೂಪದಲ್ಲಿವೆ. ಅದಕ್ಕೆ ಉಪವಾಸವು ಸೇರುತ್ತದೆ (ಕೀರ್ತನೆ 35:13 ಮತ್ತು ದಾನಿ 10:2,3,12ಕ್ಕೆ ಹೋಲಿಸಿ ನೋಡಿರಿ).

ಮಹಾದೋಷಪರಿಹಾರಕದಿನದ ಕೊಂಬಿನಂತೆ ಧ್ವನಿಗೈ ಎಂಬುದಾಗಿ ದೇವರು ಆಜ್ಞೆ ಮಾಡುತ್ತಾನೆ. ಟಗರಿನ ಕೊಂಬಿನಕಹಳೆಯನ್ನು ಮಹಾದೋಷ ಪರಿಹಾರದ ದಿನಕ್ಕೆ ಹತ್ತು ದಿನಗಳು ಮೊದಲೇ ಊದುತ್ತಿದ್ದರು (ಯಾ.ಕಾಂಡ 23:24). ಇದರ ಜೊತೆಗೆ ಪ್ರತಿ 50 ವರ್ಷಗಳಿಗೊಮ್ಮೆ ಮಹಾದೋಷ ಪರಿಹಾರಕ ದಿನದಂದು ಜೂಬಿಲಿ ಸಂವತ್ಸರವನ್ನು ಪ್ರಕಟಿಸುವ ಸಲುವಾಗಿ ಊದುತ್ತಿದ್ದರು. ಯಾ.ಕಾಂಡ 25:9,10ನ್ನು ಯೆಶಾಯ 27:13ರೊಂದಿಗೆ ಹೋಲಿಸಿರಿ).

ಯೆಶಾಯ 58:3–7 ವಚನಗಳನ್ನು ಓದಿರಿ. ಕರ್ತನು ಅವರ ಮೇಲೆ ಯಾವ ದೂರನ್ನು ಹೊರಿಸುತ್ತಿದ್ದಾನೆ? ಅವರ ಉಪವಾಸದಲ್ಲಿ ಯಾವುದು ತಪ್ಪಾಗಿತ್ತು?

____________________________________________________

____________________________________________________

ದೇವರು ತಮ್ಮ ಭಯಭಕ್ತಿಯನ್ನು ನೋಡಿ ಮೆಚ್ಚಿಕೊಳ್ಳಬೇಕೆಂದು ಜನರು ನಿರೀಕ್ಷೆ ಇಟ್ಟುಕೊಂಡಿದ್ದರು ಎಂಬುದಾಗಿ ತೋರಿಬರುತ್ತದೆ. ಹಿಂದೆ ಅವರಲ್ಲಿ ಅಂತಹ ಭಯಭಕ್ತಿವಿದ್ದುದು ನಿಜವಾಗಿತ್ತು. ಮಹಾದೋಷಪರಿಹಾರಕ ದಿನದಲ್ಲಿ ತಮ್ಮ ಕೃತಜ್ಞತೆಯನ್ನು ಮತ್ತು ನಿಷ್ಠೆಯನ್ನು ದೇವರಿಗೆ ತೋರ್ಪಡಿಸುವ ಸಲುವಾಗಿ ತಮ್ಮನ್ನು ಕುಂದಿಸಿಕೊಂಡು ಸ್ವನಿರಾಕರಣೆಯನ್ನು ಮಾಡಿಕೊಳ್ಳುತ್ತಿದ್ದರು. ಆ ದಿನದಲ್ಲಿ ಮಹಾಯಾಜಕನು ದೇವದರ್ಶನ ಗುಡಾರದ ಮಹಾಪರಿಶುದ್ಧ ಸ್ಥಳಕ್ಕೆ ಹೋಗಿ ದೇವರ ಮಂಜೂಷದ ಮುಂದೆ ನಿಂತುಕೊಂಡು ಗುಡಾರವನ್ನು ಮತ್ತು ಜನರನ್ನು ಶುದ್ಧಪಡಿಸುತ್ತಿದ್ದರು (ಯಾ.ಕಾಂಡ 16ನ್ನು ಯಾ.ಕಾಂಡ 4ನೇ ಅಧ್ಯಾಯಕ್ಕೆ ಹೋಲಿಸಿರಿ).

ದೇವರು ನ್ಯಾಯವಿಚಾರಣೆಯ ದಿನ ಅವರನ್ನು ರಕ್ಷಿಸುವ ಸಲುವಾಗಿ ಅವನಿಗೆ ಕೃತಜ್ಞತೆಯನ್ನು ಸಲ್ಲಿಸಲು, ಧನ್ಯವಾದಗಳನ್ನು ಅರ್ಪಿಸಲು ಅವರು ಇದನ್ನು ಪಾಲಿಸುತ್ತಿದ್ದರು. ತಮ್ಮ ಶ್ರದ್ಧಾಭಕ್ತಿಗಳನ್ನು ದೇವರು ಒಪ್ಪಿಕೊಳ್ಳಬೇಕೆಂದು ಹಾಗೆ ಮಾಡುತ್ತಿರಲಿಲ್ಲ. ದೇವದರ್ಶನ ಗುಡಾರವನ್ನು ಹೊಲೆ ಮಾಡುತ್ತಿದ್ದುದು ಜನರ ಪಾಪಗಳೇ ಆಗಿದ್ದವು. ಅವರು ಮಾಡಿದ ಪಾಪಗಳ ದೆಸೆಯಿಂದ ಹೊಲೆಯಾದ ಗುಡಾರವು ಪಾಪಗಳ ಸಲುವಾಗಿ ಸಮರ್ಪಿಸಿದ ಪ್ರಾಣಿಗಳ ರಕ್ತದಿಂದ ಶುದ್ಧವಾಗುತ್ತಿತ್ತು.

ಕೇವಲ ಧಾರ್ಮಿಕತೆಯಲ್ಲಿ ತೊಡಗಿಸಿಕೊಳ್ಳುವುದರ ಅಥವಾ ನಿಜವಾಗಿ ಕ್ರಿಸ್ತನ ಅನುಯಾಯಿಯಾಗಿರುವುದರ ವ್ಯತ್ಯಾಸವನು ಒಂದು ಪಾಠವು ಈ ವಚನಗಳಿಂದ ಸಿಗುತ್ತದೆ. ನಾವು ವ್ಯತ್ಯಾಸಗಳನ್ನು ಹೇಗೆ ನೋಡುತ್ತೇವೆ? ನಾವು ಆಚರಿಸುವ ಧಾರ್ಮಿಕ ಆಚರಣೆಗಳಿಂದ ಕರ್ತನು ನಾವು ಏನು ಮಾಡಬೇಕೆಂದು

ಆಜ್ಞಾಪಿಸುತ್ತಾನೋ ಅದನ್ನು ಮಾಡಿದ್ದೇವೆ ಎಂದು ನಂಬಿಕೊಳ್ಳುವುದರಿಂದ ಇಸ್ರಾಯೇಲ್ಯರು ಯಾವ ಅಪಾಯವನ್ನು ಎದುರಿಸುತ್ತಿದ್ದರೋ ಅದೇ ಅಪಾಯವನ್ನು ವೈಯಕ್ತಿಕವಾಗಿ ನಾವು ಸಹ ಹೇಗೆ ಎದುರುಸುತ್ತಿದ್ದೇವೆ?

**ಬುಧವಾರ** **ಮಾರ್ಚ್ 10**

## ತೀವ್ರ ಹೋರಾಟ (ಯೆಶಾಯ 58:1–12)

ದೇವಜನರನ್ನು ಕೊಂಬೂದಿ ಜ್ಞಾಪಕ ಪಡಿಸಿದನಂತರ ಹತ್ತು ದಿನಗಳು ಕಳೆದ ಮೇಲೆ ಮಹಾದೋಷಪರಿಹಾರಕ ದಿನದಂದೇ ಕರ್ತನನ್ನು ತಮ್ಮ ರಾಜನೆಂದು ಒಪ್ಪಿಕೊಳ್ಳುವುದಕ್ಕೆ ಸೇರಿಬರುತ್ತಿದ್ದರು. ಆವಾಗ ತಮ್ಮನ್ನು ನಿರಾಕರಿಸಿಕೊಂಡು ದೀನತೆಯಿಂದ ತಮ್ಮ ರಾಜನಿಗೆ ತೋರುವ ನಿಷ್ಠೆಯನ್ನು ದೃಢಪಡಿಸುತ್ತಿದ್ದರು, ಪ್ರವಾದಿಯು ತನ್ನ ಸ್ವರವನ್ನೆತ್ತಿ ದೇವರಿಗೆ ಎದುರಾಗಿ ತಿರುಗಿಬಿದ್ದಿರೆಂದು ಜನರಿಗೆ ಸಾರಿ ಹೇಳುತ್ತಿದ್ದನು (ಯೆಶಾಯ 58:1).

ಯೆಶಾಯ 58:6–12 ವಚನಗಳನ್ನು ಚೆನ್ನಾಗಿ ಓದಿರಿ. ಜನರ ಯಾವ ಕ್ರಿಯೆಗಳನ್ನು ದೇವರು ತಮ್ಮನ್ನು ತಾವು ನಿರಾಕರಿಸಿಕೊಳ್ಳುವುದಕ್ಕಾಗಿ ಮಾಡಿದ ಕ್ರಿಯೆಗಳೆಂದು ಪರಿಗಣಿಸುತ್ತಾನೆ? ಹೌದು! ಯಾವುದು ಕಷ್ಟ. ಕೆಲವು ದಿನಗಳ ಮಟ್ಟಿಗೆ ಊಟವನ್ನು ತಪ್ಪಿಸುವುದೇ ಅಥವಾ ನಿಮ್ಮ ಊರಿನಲ್ಲಿರುವ ನಿರ್ಗತಿಕ ಜನರಿಗೆ ಊಟಕೊಡಲು ನಿಮ್ಮ ಸಮಯ ಮತ್ತು ಹಣವನ್ನು ವ್ಯಯ ಮಾಡುವುದೆ? ಈ ಎಲ್ಲಾ ಕಾರ್ಯಗಳ ಹಿಂದೆ ಯಾವ ನೇಮಗಳನ್ನು ಕಾಣಬೇಕಾಗಿದೆ? ಈ ಕ್ರಿಯೆಗಳು ಸತ್ಯವಾದ ಧರ್ಮವನ್ನು ಹೇಗೆ ಒಳಗೊಂಡಿವೆ?

ಯಾವನೇ ಆಗಲಿ ಧಾರ್ಮಿಕ ವ್ಯಕ್ತಿಯಾಗಿರಬಲ್ಲನು: ಯಾರೇ ಆಗಲಿ ಧಾರ್ಮಿಕ ಸಂಸ್ಕಾರಗಳಿಗೆ ಒಳಪಡಬಹುದು, ಸರಿಯಾದ ಸಂಸ್ಕಾರಗಳಿಗೆ ಸರಿಯಾದ ಸಮಯದಲ್ಲಿಯೇ ಸೂತ್ರಬದ್ಧವಾಗಿಯೇ ಒಳಪಡಬಹುದು. ಆದರೆ ಅವುಗಳನ್ನು ಮಾಡುವುದಷ್ಟೆ ದೇವರಿಗೆ ಸಾಕಾಗುವುದಿಲ್ಲ. ಯೇಸುಕ್ರಿಸ್ತನ ಜೀವನವನ್ನು ಗಮನಿಸಿರಿ. ಆತನ ಕಾಲದಲ್ಲಿದ್ದ ಧಾರ್ಮಿಕ ಆಚರಣೆಗಳಿಗೆ ಎಷ್ಟೇ ವಿಧೇಯನಾಗಿ ನಡಕೊಂಡರೂ ಸುವಾರ್ತೆಯ ಬರೆದ ಬರಹಗಾರರು ಆತನ ಕರುಣೆಯುಕ್ತ ಕೆಲಸಗಳು, ಸ್ವಸ್ಥಪಡಿಸುವಿಕೆ, ಆಹಾರ ಕೊಡುವುದು

ಕ್ಷಮಾಪಣೆಯನ್ನು ಹೆಚ್ಚಾಗಿ ಬಯಸುವವರಿಗೆ ಕ್ಷಮಾಪಣೆಯನ್ನು ಕೊಡುವುದರ ಬಗ್ಗೆ ಹೆಚ್ಚಿನ ಗಮನ ಕೊಟ್ಟರು.

ಪ್ರಪಂಚಕ್ಕೆ ಸತ್ಯವನ್ನು ಸಾರುವ ಒಂದು ಸಭೆಯನ್ನು ಒಂದು ಜನಾಂಗವನ್ನು ಕರ್ತನು ಹುಡುಕುತ್ತಾನೆ.

ಯಾವುದು ಯೇಸುಕ್ರಿಸ್ತನಂತೆ ಜನರನ್ನು ಸತ್ಯಕ್ಕೆ ಇನ್ನೂ ಉತ್ತಮವಾದ ರೀತಿಯಲ್ಲಿ ಸೆಳೆಯುತ್ತದೆ: ಕಟ್ಟುನಿಟ್ಟಿನ ಆಹಾರ ಪಥ್ಯ ನಿಯಮಗಳೋ ಅಥವಾ ಹಸಿದವರಿಗೆ ನೆರವು ನೀಡುವ ಸಿದ್ಧ ಮನಸ್ಸೋ? ಸಬ್ಬತ್ತಿನಲ್ಲಿ ಕಟ್ಟುನಿಟ್ಟಾಗಿ ವಿಶ್ರಾಂತಿ ಪಡೆಯುವುದೋ ಅಥವಾ ನಿಮ್ಮ ಸ್ವಂತ ಸಮಯ ಮತ್ತು ಶಕ್ತಿಯನ್ನು ಕೊರತೆಯಲ್ಲಿ ಬಿದ್ದವರಿಗೋಸ್ಕರ ವ್ಯಯ ಮಾಡುವ ಇಚ್ಛೆಯೋ?

ಮತ್ತಾಯ 25:40 ಮತ್ತು ಯಾಕೋಬ 1:27ನ್ನು ಓದಿರಿ. ಈ ವಚನಗಳು ನಮಗೆ ಏನು ಹೇಳುತ್ತವೆ?

ಕೊರತೆಯಲ್ಲಿರುವವರ ಸೇವೆ ಮಾಡುವಾಗ ನಮಗೆ ಆಶೀರ್ವಾದಗಳು ಬರುತ್ತವೆ ಎಂದು ದೇವರು ಹೇಳುವ ಯೆಶಾಯ 58ನೇ ಅಧ್ಯಾಯದ ವಚನಗಳನ್ನು ಗಮನಿಸಿರಿ. ಇಲ್ಲಿ ದೇವರು ಏನು ಹೇಳುತ್ತಿದ್ದಾನೆಂದು ನೀವು ಆಲೋಚಿಸುವಿರಿ? ಇವುಗಳನ್ನು ನಾವು ಮಾಡಿದಾಗ ನಮ್ಮ ಜೀವನದಲ್ಲಿ ದೊರೆಯುವ ವಾಗ್ದಾನಗಳು ಅತೀಂದ್ರಿಯ ಶಕ್ತಿಯಿಂದ (ದೇವರಿಂದ) ಸಿಗುತ್ತವೆಯೋ ಅಥವಾ ನಾವು ಸ್ವಾರ್ಥಿಗಳಾಗಿರದೆ, ದುರಾಶೆಪಡದೆ ಮತ್ತು ಸ್ವಂತ ವಿಷಯಗಳಲ್ಲಿ ಮುಳುಗಿ ಹೋಗದೆ ಇತರರಿಗೋಸ್ಕರ ನಮ್ಮನ್ನು ನಾವು ತೊಡಗಿಸಿಕೊಂಡಾಗ ಸಹಜವಾಗಿ ಈ ಆಶೀರ್ವಾದಗಳು ನಮಗೆ ಸಿಗುತ್ತವೆ ಎಂದು ಯೆಶಾಯನು ಹೇಳುತ್ತಾನೆಯೆ?

ನಿಮ್ಮ ಉತ್ತರವನ್ನು ವಿವರಿಸಿರಿ?

**ಗುರುವಾರ** **ಮಾರ್ಚ್ 11**

## ನಮಗಿರುವ ಒಂದು ಸಮಯ (ಯೆಶಾಯ 58:13,14)

ಯೆಶಾಯನು 58ನೇ ಅಧ್ಯಾಯ 13 ಮತ್ತು 14ನೇ ವಚನಗಳಲ್ಲಿ ಸಬ್ಬತ್ತಿನ ಬಗ್ಗೆ ಪ್ರಸ್ತಾಪ ಮಾಡುತ್ತಾನೆ ಏಕೆ? ಸಬ್ಬತ್ತಿಗೂ, ಇದಕ್ಕು ಮುಂಚಿನ ವಚನಗಳಲ್ಲಿರುವ ಮಹಾದೋಷಪರಿಹಾರಕ ದಿನದ ದೃಶ್ಯಕ್ಕೂ ಯಾವ ಸಂಬಂಧವಿದೆ?

ಮಹಾದೋಷಪರಿಹಾರಕ ದಿನವು ವರ್ಷಕ್ಕೊಮ್ಮೆ ಬರುವ ಸಬ್ಬತ್ತಾಗಿತ್ತು. ಈ ಒಂದು ವಿಶೇಷವಾದ ವಿಧಿಯುಕ್ತವಾದ ಸಬ್ಬತ್ತಿನಲ್ಲಿ ವಾರದ ಸಬ್ಬತ್ತಿನಂತೆಯೇ (7ನೇ ದಿನದ ಸಬ್ಬತ್ತು) ಸೂರ್ಯಾಸ್ತಮದಿಂದ ಮುಂದಿನ ಸೂರ್ಯಾಸ್ತಮದ ಅವಧಿಯಾಗಿರುತ್ತಿತ್ತು (ಯಾ.ಕಾಂಡ 23:27–32) ಮತ್ತು ಆ ದಿನದಲ್ಲಿ ಯಾವುದೇ ಉದ್ಯೋಗವನ್ನು ನಡೆಸಬಾರದಾಗಿತ್ತು (ಯಾ.ಕಾಂಡ 23:23). ಯೆಶಾಯ 58ನೇ ಅಧ್ಯಾಯದಲ್ಲಿರುವ ಪ್ರಾಥಮಿಕ ಸಂದರ್ಭವು ವಿಧಿಯುಕ್ತ ಮಹಾದೋಷ ಪರಿಹಾರಕ ದಿನವೇ ಆಗಿದ್ದರೂ ಇದರ ಸಂದೇಶವು 7ನೇ ದಿನದ ಸಬ್ಬತ್ತಿಗೂ ಅನ್ವಯವಾಗುತ್ತದೆ.

ಯೆಶಾಯ 58:13ನ್ನು ಓದಿರಿ. ಸಬ್ಬತ್ತು ನಮಗೆ ಎಂತಹ ದಿನವಾಗಿರಬೇಕಾಗಿದೆ? ಇಲ್ಲಿ ನಿರೂಪಿತವಾಗಿರುವಂತಹ ಸಬ್ಬತ್ತಿನ ಅನುಭವವನ್ನು ನಾವು ಹೇಗೆ ಮಾಡಿಕೊಳ್ಳಬಹುದು? ಸಬ್ಬತ್ತು ಏನನ್ನು ಪ್ರತಿನಿಧಿಸುತ್ತದೆಯೆಂಬುದನ್ನು ಆಲೋಚಿಸುವಾಗ ಅದು ಈ ವಚನಗಳಲ್ಲಿ ನಿರೂಪಿತವಾಗಿರುವ ರೀತಿಯಲ್ಲೇ ಇರಬೇಕು ಏಕೆ?

ಯೆಶಾಯ 58ನೇ ಅಧ್ಯಾಯವು ಮೂರು ವಿಷಯಗಳನ್ನು ಪ್ರಸ್ತಾಪಿಸುತ್ತದೆ: ಸ್ವನಿರಾಕರಣೆ, ಸಾಮಾಜಿಕ ಅನುಕಂಪ (ದಯೆ) ಮತ್ತು ಸಬ್ಬತ್ತು.

ಇವುಗಳ ನಡುವೆ ಇರುವ ಸಂಬಂಧಗಳೇನು?

ಮೊದಲನೆಯದಾಗಿ ಇವೆಲ್ಲವು ದೇವರ ಮೇಲೆ ನಮ್ಮ ಏಕಾಗ್ರತೆ (ಆಸಕ್ತಿ) ಯನ್ನು ಹೆಚ್ಚಿಸುತ್ತವೆ, ಆತನ ಆದ್ಯತೆಗಳನ್ನು ಮತ್ತು ಆತನ ಮೇಲಿನ ನಮ್ಮ ಅವಲಂಬನೆಯುನ್ನು ಗುರುತಿಸುತ್ತವೆ. ಎರಡನೆಯದಾಗಿ, ಈ ಮೂರು ವಿಷಯಗಳನ್ನು ಅನುಸರಿಸುವುದರಿಂದ ಜನರು ತನ್ನನ್ನು ತಾನು ತಗ್ಗಿಸಿಕೊಂಡ ಕ್ರಿಸ್ತ ಯೇಸುವಿನ ಸ್ವರೂಪದಲ್ಲಿ (ಫಿಲಿಪ್ಪಿ 2:8) ದೇವರನ್ನು ಅನುಸರಿಸುವವರಾಗಿ ಪರಿಶುದ್ಧತೆಯನ್ನು ಪಡೆದುಕೊಳ್ಳುತ್ತಾರೆ (ಯಾ.ಕಾಂಡ 19:2) ಕ್ರಿಸ್ತನು ಸಹಾ ಹಾಗೆಯೆ ತನ್ನನ್ನು ತಾನು ತಗ್ಗಿಸಿಕೊಂಡನು (ಫಿಲಿಪ್ಪಿ 2:8). ತನ್ನನ್ನು ತಾನು ನಿರಾಕರಿಸಿಕೊಂಡು ಕರುಣೆಯನ್ನು ಪ್ರವರ್ತಿಸಿದನು (ಯೋಹಾನ 3:16), ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ವಾರದ 7ನೇ ದಿನದಲ್ಲಿ ವಿಶ್ರಮಿಸಿಕೊಂಡನು

(ಆ.ಕಾಂಡ 2:2,3 ಮತ್ತು ವಿ.ಕಾಂಡ 20:11).

ಯೆಶಾಯ 58ನೇ ಅಧ್ಯಾಯದಲ್ಲಿರುವ ಸ್ವನಿರಾಕರಣೆ, ಸಾಮಾಜಿಕ ದಯೆ ಮತ್ತು ಸಬ್ಬತ್ತಿನ ವಿಷಯಗಳ ಮಧ್ಯೆಯಿರುವ ಇತರ ಅಂಶಗಳನ್ನು ಗಮನಿಸಿ: ವಾರವೆಲ್ಲ ದುಡಿದವರಿಗೆ ದಯೆ ತೋರಿಸುವುದಕ್ಕಾಗಿ ಸಬ್ಬತ್ತಿನ ಬಿಡುವು ಅಗತ್ಯ ಯಾಕೆಂದರೆ ಸಬ್ಬತ್ತು ಅವರಿಗೆ ಪುನಃಶ್ಚೇತನ ನೀಡುತ್ತದೆ (ವಿ.ಕಾಂಡ 23:12, ಮಾರ್ಕ 2:27); ಸಬ್ಬತ್ತಿನ ದಿನದಲ್ಲಿ ಜನರಿಗೆ ದಯತೋರಿಸಿ ಒಳ್ಳೆಯ ಕೆಲಸವನ್ನು ಮಾಡುವುದು ತಕ್ಕದ್ದೇ ಸರಿ ಎಂದು ಯೇಸು ತೋರಿಸಿದ್ದಾನೆ (ಮಾರ್ಕ 3:1–5, ಯೋಹಾನ 5:1–17).

ಇತರರಿಗೆ ಸಹಾಯ ಮಾಡಿದಾಗ ಸಂತೋಷ ಸಿಗುವಂತೆಯೇ (ಯೆಶಾಯ 58:10,11) ಸತ್ಯವೇದಾನುಸಾರವಾಗಿರುವ ನಿಜವಾದ ಸಬ್ಬತ್ತನ್ನು ಕೈಗೊಳ್ಳುವುದರಿಂದಲೂ ನಮಗೆ ಸಂತೋಷ ಸಿಗುತ್ತದೆ (ಯೆಶಾಯ 58:14). ನಾವು ಈ ಆಶೀರ್ವಾದಗಳನ್ನು ಅನುಭವಿಸವುದಕ್ಕೋಸ್ಕರ ನಮ್ಮ ಜೀವಿತದಲ್ಲಿ ಯಾವ ಬದಲಾವಣೆಯಾಗಬೇಕು?

**ಶುಕ್ರವಾರ** **ಮಾರ್ಚ್ 12**

**ಹೆಚ್ಚಿನ ಚಿಂತನೆ :** "ಸ್ವನಿರಾಕರಣೆ ಮಾಡಿಕೊಳ್ಳದೆ ಯಾವ ಒಬ್ಬನೂ ನಿಜವಾದ ಉಪಕಾರಶೀಲತೆಯನ್ನು ಪಾಲಿಸಲಾರನು. ನಾವು ಯೇಸುಕ್ರಿಸ್ತನ ಪ್ರತಿನಿಧಿಗಳಾಗಿ ಸರಳವಾದ ಜೀವನದಿಂದ, ಸ್ವನಿರಾಕರಣೆಯಿಂದ, ದುಂದುವೆಚ್ಚವನ್ನು ತಡೆಯುವುದರಿಂದ ಮಾತ್ರ ನಮಗೆ ನೇಮಿಸಿದ ಕೆಲಸಗಳನ್ನು ಪೂರೈಸಬಹುದು. ಗರ್ವವನ್ನು, ಲೌಕಿಕವಾದ ಆಕಾಂಕ್ಷೆಯನ್ನು ನಮ್ಮ ಹೃದಯಗಳಲ್ಲಿ ನಂದಿಸಿರಬೇಕು. ಕ್ರಿಸ್ತನ ಜೀವಿತದಲ್ಲಿ ಪ್ರಕಟವಾದ ನಿಸ್ವಾರ್ಥದ ನಿಯುಮವನ್ನು ನಾವು ಮುಂದುವರೆಸಬೇಕು. ನಮ್ಮ ಮನೆಯ ಗೋಡೆಗಳ ಮೇಲೆ, ಚಿತ್ರಪಟಗಳ ಮೇಲೆ ಮತ್ತು ಪೀಠೋಪಕರಣಗಳ ಮೇಲೆ "ಅಲೆಯುತ್ತಿರುವವರನ್ನು ಮನೆಗೆ ಬರ ಮಾಡಿಕೊಳ್ಳುವನು" ಎಂಬುದನ್ನು ಓದಬೇಕು. ನಮ್ಮ ಕಪಾಟುಗಳ ಮೇಲೆ ದೇವರ ಕೈಬೆರಳುಗಳು ಬರೆದ ವಾಕ್ಯ "ಬೆತ್ತಲೆಯವರನ್ನು ಕಂಡಾಗೆಲ್ಲ ಹೊದಿಸುವುದು" ಎಂಬುದು ಕಾಣಿಸಬೇಕು. ಊಟದ ಕೋಣೆಯಲ್ಲಿ ಆಹಾರ

ಪದಾರ್ಥಗಳಿಂದ ತುಂಬಿರುವ ಮೇಜಿನ ಮೇಲೆ "ಹಸಿದವರಿಗೆ ನಿನ್ನ ಆಹಾರವನ್ನು ಹಂಚುವುದು" ಎಂದು ಬರೆದಿರುವುದನ್ನು ಕಾಣಬೇಕು (ಯೆಶಾಯ 58:7)– ಎಲೆನ್ ಜಿ ವೈಟಮ್ಮನವರ "ದಿ ಮಿನಿಸ್ಟ್ರಿ ಆಫ್ ಹೀಲಿಂಗ್" ಪುಸ್ತಕದಲ್ಲಿ 206ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೆಶಾಯನು ತನ್ನ ಕಾಲದಲ್ಲಿ ಜೀವಿಸುತ್ತಿದ್ದ ಜನರಿಗೆ ಹಾಕಿದ ಪ್ರಶ್ನೆಯನ್ನು ನೋಡಿರಿ: "ಆಹಾರವಲ್ಲದ್ದಕ್ಕೆ ಹಣವನ್ನು ಏಕೆ ವ್ರಯ ಮಾಡುತ್ತೀರಿ? ತೃಪ್ತಿಗೊಳಿಸದ ಪದಾರ್ಥಕ್ಕೆ ನಿಮ್ಮ ದುಡಿತವನ್ನು ವೆಚ್ಚ ಮಾಡುವುದೇಕೆ? (ಯೆಶಾಯ 55:2) ನಮ್ಮಲ್ಲಿ ಯಾರಾದರೂ ತೃಪ್ತಿಗೊಳಿಸಿದ ಪದಾರ್ಥಕ್ಕೆ ದುಡಿತವನ್ನು ಯಾವುದಾದರೂ ರೀತಿಯಲ್ಲಿ ವೆಚ್ಚ ಮಾಡುತ್ತಿದ್ದಾರೆಯೆ? ಎಂಬುದಾಗಿ ನೀವು ಪ್ರಶ್ನೆ ಮಾಡಿಕೊಳ್ಳಿರಿ. ಇದೇ ಬಲೆಯೊಳಗೆ ಬಹಳ ಸುಲಭವಾಗಿ ಬಿದ್ದು ಹೋಗುತ್ತೇವೆ ಏಕೆ?

2. ಯೆಶಾಯನ ಕಾಲದಲ್ಲಿ ಮಹಾದೋಷಪರಿಹಾರಕ ದಿನದಂದು ಸ್ವನಿರಾಕರಣೆ ಸಾಮಾಜಿಕ ದಯೆ, ಸಬ್ಬತ್ತು ಇವುಗಳು ಹೇಗೆ ಮುಖ್ಯವಾಗಿದ್ದವೋ ಹಾಗೆಯೇ ಅಂತ್ಯಕಾಲದ ದೋಷಪರಿಹಾರಕ ದಿನದ ಸಂದರ್ಭದಲ್ಲೂ ಅಷ್ಟೇ ಮುಖ್ಯವಾಗಿವೆ (ದಾನಿ 8:14). ಆವಾಗ ದೇವರ ಯಾವ ಜೂಬಿಲಿ ಸಂವತ್ಸರದ ಕೊಂಬು (ತುತ್ತೂರಿ) ಮಹಾವಿಮೋಚನೆಯ ಸಂಕೇತವಾಗಿ ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ಊದಲ್ಪಡುತ್ತದೆ? (1 ಕೊರಿಂಥ 15:52ನ್ನು ಯಾ.ಕಾಂಡ 25:9,10ಕ್ಕೆ ಹೋಲಿಸಿರಿ) ನಿಮ್ಮ ಉತ್ತರವನ್ನು ವಿವರಿಸಿರಿ.

3. ಸಬ್ಬತ್ತನ್ನು ಕೈಗೊಳ್ಳುವ ವಿಷಯಕ್ಕೆ ಸಂಬಂಧಿಸಿದ ಚರ್ಚೆಯನ್ನು ಎತ್ತಿರಿ. ಸಬ್ಬತ್ ದಿನದಲ್ಲಿ ನಿಮ್ಮ ನಿತ್ಯದ ಕೆಲಸವನ್ನು ಮಾಡದೆ ಸ್ವೇಚ್ಛೆಯಾಗಿ ನಡೆಯದೆ ಸ್ವಕಾರ್ಯದಲ್ಲಿ ನಿರತರಾಗದೆ ಇರಬೇಕು ಅದೇ ಸಮಯದಲ್ಲಿ ಸಬ್ಬತ್ ಉಲ್ಲಾಸಕರವಾದದೆಂದು ಯೆಶಾಯನು ಹೇಳುವಾಗ ಇದು ಯಾವ ಅರ್ಥವನ್ನು ಕೊಡುತ್ತದೆ ಆಲೋಚಿಸುವಿರಿ? (ಯೆಶಾಯ 58:13). ನಾವು

ಎರಡನ್ನೂ ಹೇಗೆ ಮಾಡಬಲ್ಲೆವು? ಯೆಶಾಯ 58ನೇ ಅಧ್ಯಾಯದಲ್ಲಿರುವ ಎಲ್ಲಾ ವಚನಗಳ ಹಿನ್ನೆಲೆ (ಸಂದರ್ಭವನ್ನು) ಮನಸ್ಸಿನಲ್ಲಿಟ್ಟುಕೊಳ್ಳಿರಿ.

**ಸಾರಾಂಶ:** ಯೆಶಾಯ 55 ಮತ್ತು 58ನೇ ಅಧ್ಯಾಯದಲ್ಲಿ, ಪ್ರವಾದಿಯು ಜನರಿಗೆ ತಮ್ಮ ಆಲೋಚನೆಗಳನ್ನು ಮತ್ತು ಮಾರ್ಗಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಅವರ ಸಂತೋಷಕ್ಕೆ ದೇವರ ಆಲೋಚನೆಗಳು ಮತ್ತು ಮಾರ್ಗಗಳು ಸರಿಯಾದವುಗಳೆಂದು (ಉನ್ನತವಾದವುಗಳು) ಮನವಿ ಮಾಡುತ್ತಾನೆ. ಆತನು ಕರುಣೆಯಿಂದ ಕ್ಷಮಿಸುತ್ತಾನೆ, ಕ್ಷಮಿಸಲ್ಪಟ್ಟವರು ಕರುಣೆಯುಳ್ಳವರಾಗಿ ಮಹಾದೋಷ ಪರಿಹಾರಕ ದಿನ ಮತ್ತು ಸಬ್ಬತ್ ದಿನಕ್ಕೆ ತಕ್ಕ ಮಾನಸಿಕ ಸ್ಥಿತಿಯಿಂದ ನಡೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತಾನೆ (ಆಗ್ರಹ ಪಡಿಸುತ್ತಾನೆ) ಯಾಕೆಂದರೆ ದೇವರ ಬಹುಮಾನವಾದ ಕ್ಷಮಾಪಣೆಯನ್ನು ನಿಜವಾಗಿ ಪಡೆದುಕೊಂಡಿದ್ದರೆ ಅದು ಹೃದಯವನ್ನು ಪರಿವರ್ತಿಸುತ್ತದೆ.